ಪರಿಗಣಿತವಾಗುತ್ತಾರೆ. ಅದೂ ಅಲ್ಲದೆ ಅವರೊಬ್ಬ ಪರಿಶುದ್ಧ ಮನಸ್ಸಿನ ಪ್ರಾಮಾಣಿಕ ವ್ಯಕ್ತಿ."

"ಸರಿಯಾಗಿ ಹೇಳಿದಿರಿ. ಅತ್ಯಂತ ಪರಿಶುದ್ಧ ಮನಸ್ಸಿನ ಪ್ರಾಮಾಣಿಕ ವ್ಯಕ್ತಿ." ಲೀನಾಳ ಈ ಎರಡನೇ ಹನಿಮೂನ್ ಬಗ್ಗೆ ಯೋಚಿಸಿದ ಅರ್ತೆನ್ಸಿಯಾಳಿಗೆ ಒಳಗೊಳಗೇ ನಗದೆ ಇರಲು ಸಾಧ್ಯವೇ ಆಗಲಿಲ್ಲ. ಮೊದಲನೇ ಸಲವೂ ಲೀನಾ ರೋಮ್‌ಗೆ ಹೋಗಿದ್ದಳು. ಈ ಸಲವೂ ರೋಮ್‌ಗೆ ಹೋಗುತ್ತಿದ್ದಾಳೆ. ಮೊದಲನೇ ಸಲ ಅವಳ ಜೊತೆ ಅತ್ಯಂತ ಚುರುಕಾದ, ಧೂರ್ತ ಹಾಗೂ ಉತ್ಸಾಹಶಾಲಿ (ಕೆಲವೊಮ್ಮೆ ಅತಿ ಉತ್ಸಾಹಶಾಲಿ) ಸಿನೋರ್ ತಾದ್ದೇಯಿ ಇದ್ದರೆ ಈ ಸಲ ಅವನ ಜಾಗದಲ್ಲಿ ಬೋಳು ತಲೆಯ ಮುಗ್ಧ ಮುಖದ ಹಾಗೂ ಅನುಭವದಲ್ಲಿ ತೀರಾ ಎಳಸಾದ ಈ ಹುಡುಗ ಬರ್ತೊಲಿನೊ ಇದ್ದಾನೆ.

ಟ್ರೈನ್ ಹೊರಡುವುದಕ್ಕೆ ಮುಂಚೆ ಅಂಕಲ್ ಅನಸೇಲಮೋ ತಮ್ಮ ಸೊಸೆಗೆ – "ಬರ್ತಲಿನೋನನ್ನು ಚೆನ್ನಾಗಿ ನೋಡಿಕೋ. ಅವನ ಕಡೆ ಸ್ವಲ್ಪ ನಿಗಾ ಇಡು." ಎಂದು ಹೇಳಿದ್ದರು. ಲೀನಾ ಈಗಾಗಲೇ ತನ್ನ ಮೊದಲ ಹನಿಮೂನ್‌ಗೆ ಒಂದು ಸಲ ರೋಮ್‌ಗೆ ಹೇಗೂ ಬಂದಿದ್ದಳು. ಆ ದೇಶದಲ್ಲಿ ಎಲ್ಲೆಲ್ಲಿ ಹೇಗೆ ಹೇಗೆ ಸುತ್ತಾಡಬೇಕು ಅನ್ನುವುದೆಲ್ಲ ಅವಳಿಗೆ ಚೆನ್ನಾಗಿ ಗೊತ್ತಿತ್ತು. ಹಾಗಾಗಿ ಈ ಸಲದ ಇಡೀ ಸುತ್ತಾಟದಲ್ಲಿ ಬರ್ತೊಲಿನೋನನ್ನು ಹೆಚ್ಚು ಕಡಿಮೆ ಮಕ್ಕಳ ಥರ ಕೈಹಿಡಿದುಕೊಂಡು ಕರೆದುಕೊಂಡು ಹೋಗಿದ್ದಳು.

ಕೊನೆಗೆ ರೈಲು ರೋಮ್ ತಲುಪಿದಾಗ, "ನೀವು ಯಾವ ಚಿಂತೇನೂ ಮಾಡಬೇಡಿ. ನಾನು ಎಲ್ಲ ವ್ಯವಸ್ಥೆನೂ ಮಾಡುತ್ತೀನಿ" ಎಂದು ಗಂಡನಿಗೆ ಹೇಳಿದಳು. ಅವರ ಸಾಮಾನುಗಳನ್ನೆಲ್ಲ ಒಂದು ಕಡೆ ಗುಡ್ಡೆ ಹಾಕುತ್ತಿದ್ದ ಕೂಲಿಗೆ ಹೋಟೆಲ್ ವಿಕ್ಟೋರಿಯಾಕ್ಕೆ ಕರೆದುಕೊಂಡು ಹೋಗಲು ಹೇಳಿದಳು.

ಸ್ಟೇಷನ್ ಹೊರಗಡೇನೆ ಹೋಟೆಲ್ ವಿಕ್ಟೋರಿಯಾದ ಬಸ್ಸು ಇವರಿಗಾಗಿ ಕಾದಿತ್ತು. ಡ್ರೈವರ್‌ನನ್ನು ಗುರುತಿಸಿ ಅವನ ಕಡೆ ನೋಡಿ ಲೀನಾ ಸ್ವಲ್ಪ ತಲೆ ಅಲ್ಲಾಡಿಸಿದಳು.

"ಅದು ತುಂಬಾ ಸುಂದರವಾದ ಹೋಟೆಲ್. ನೋಡಿ, ಅದು ಒಂದು ಚಿಕ್ಕ, ತುಂಬ ಚೊಕ್ಕಟವಾದ, ಕಾರ್ಯತತ್ಪರರಾದ ಕೆಲಸಗಾರರಿಂದ ಕೂಡಿದ ಹೋಟೆಲ್. ಅದು ಇರೋದು ನಗರದ ಮಧ್ಯಭಾಗದಲ್ಲಿ. ಖರ್ಚು ಕೂಡ ಅಷ್ಟೇನೂ ಹೆಚ್ಚಾಗಲ್ಲ. ಆರು ವರ್ಷದ ಹಿಂದೆ ಮೊದಲ ಹನಿಮೂನ್‌ಗೆ ಅವರ ಜೊತೆ ಬಂದು ನಾನು ಇದೇ ಹೋಟೆಲ್‌ನಲ್ಲಿ ತಂಗಿದ್ದೆ... ನೋಡ್ತಾ ಇರಿ, ನಿಮಗೂ ಇದು ತುಂಬಾ ಹಿಡಿಸುತ್ತೆ."

ಆ ಹೋಟೆಲ್ ಲೀನಾಳಿಗೆ ಥೇಟ್ ಮನೆ ತರಹಾನೇ ಅನ್ನಿಸಿತು. ಯಾರೋ ತನ್ನನ್ನು ಗುರುತುಹಿಡಿದಿದ್ದಾರೆ ಎಂದು ಅನ್ನಿಸಲೇ ಇಲ್ಲ. ಆದರೆ ಅವಳಿಗೆ ಮಾತ್ರ ಎಲ್ಲರನ್ನೂ ಗುರುತಿಸಲು ಸಾಧ್ಯವಾಯಿತು. ಆ ಮುದುಕ, ಅದೇ ಪಿಪ್ಪೋ. ಆರು ವರ್ಷದ ಹಿಂದೆ ಇದೇ ಮನುಷ್ಯನೇ ಅವರ ಕೆಲಸ ಬೊಗಸೆ ಎಲ್ಲ ನೋಡಿಕೊಂಡಿದ್ದ. ಅವನು ಅವರನ್ನು ಎರಡನೇ ಮಹಡಿಯ ಎನ್–12ನೇ ನಂಬರಿನ ಕೊಠಡಿಗೆ ಕರೆದುಕೊಂಡು ಹೋದ. ಕೊಠಡಿಯೇನೋ ಸಾಕಷ್ಟು ದೊಡ್ಡದಾಗಿತ್ತು. ಚೆನ್ನಾಗಿ ಸಜ್ಜುಗೊಳಿಸಲಾಗಿತ್ತು. ಆದರೆ ಲೀನಾಳಿಗೆ ಆ ಕೊಠಡಿ ಇಷ್ಟವಾಗಲಿಲ್ಲ. "ಪಿಪ್ಪೋ ಹತ್ತೊಂಬತ್ತನೇ ನಂಬರಿನ ಕೊಠಡಿ ಖಾಲಿ ಇದೆಯೇನು?" ಪಿಪ್ಪೊ, ಖಾಲಿ ಇದೆಯೇನೋ ಎನ್ನುವುದನ್ನು ಪತ್ತೆಮಾಡಿಕೊಂಡು ಬರಲು ಹೋದ. ಆಗ ಲೀನಾಳಿಗೆ ಆರು ವರ್ಷದ ಹಿಂದೆ 'ಅವರಿಬ್ಬರಿಗೂ' ಹೀಗೇ ಆಗಿತ್ತು ಎನ್ನುವುದು ನೆನಪಾಯಿತು. 'ಅವರಿಬ್ಬರಿಗೂ' ಎರಡನೇ ಮಹಡಿಯಲ್ಲಿ ಇವರು ಒಂದು ಕೊಠಡಿ ರೆಡಿಮಾಡಿ ಇಟ್ಟಿದ್ದರು. ಆದರೆ 'ಅವರು' ಮೂರನೇ ಮಹಡಿಯ ಎನ್–19 ನಂಬರಿನ ಕೊಠಡಿಯನ್ನು ಕೊಡಬೇಕೆಂದು ಕೇಳಿದ್ದರು.

"ಏನೂ ಅಂದರೆ, ನಾವು ಅಲ್ಲೇ ಇರೋಣ. ಗೌಜು–ಗದ್ದಲ ಬಹಳ ಕಡಿಮೆ. ಗಾಳೀನೂ ಚೆನ್ನಾಗಿ ಬೀಸುತ್ತೆ. ಅದೇ ಆ ಒಂದು ಕೊಠಡಿ."